

ಕಾವ್ಯ ಎನ್ನುವುದು ಯಾವುದೇ ಒಂದು ದೃಷ್ಟಿಕೋನದ, ಸಿದ್ಧಾಂತದ ಅನುಕರಣೆಯಾಗಲಿ, ಸಮರ್ಥನೆಯಾಗಲಿ ಅಲ್ಲ. ಕಾವ್ಯ ಎನ್ನುವುದು ಲೌಕಿಕವೂ ಅಲ್ಲ, ಲೋಕೋತ್ತರವೂ ಅಲ್ಲ. ಅದು ಅಲೌಕಿಕ.

◆ **ನಿಮ್ಮ ಕವಿತೆಯ ಚರ್ಚೆಯ ಸಂದರ್ಭದಲ್ಲಿ ಬಹಳಷ್ಟು ವಿಮರ್ಶಕರು ಮತ್ತೆಮತ್ತೆ ಬಳಸುವ ಪದ ಅಂದ್ರೆ ಅನುಭಾವ. ನಿಮ್ಮ ದೃಷ್ಟಿಯಲ್ಲಿ ಅನುಭಾವ ಅಂದ್ರೆ ಏನು? ಅದು ಹೇಗೆ ನಿಮ್ಮ ಕಾವ್ಯವ್ಯಕ್ತಿತ್ವಕ್ಕೆ ಒದಗಿ ಬಂದಿದೆ?**

ಅನುಭಾವ ಎಂಬುದು ಕನ್ನಡದಲ್ಲಿ ಶರಣರು ರೂಪಿಸಿದ ಒಂದು ನುಡಿಗಟ್ಟು. ಇಂಗ್ಲಿಷಿನ 'ಮಿಸ್ಟಿಸಿಸಂ' ಎಂಬ ಅಸ್ಪಷ್ಟ ಪದ ಇದಕ್ಕೆ ಹತ್ತಿರವಾದದ್ದು. ಜೈನರು, ಸೂಫಿಗಳೂ ಇದನ್ನು 'ರುಬಾನಿಯತ್' ಎನ್ನುವರು. ಈ ತಿಳಿವು ಏನಿದೆ ಅದು ಒಳಗಿಳಿಯುವುದೇ ಅನುಭಾವ. ಅಂದ್ರೆ 'ನನ್ನೊಳಗೆ ನಾ ತಿಳಕೊಂಡೆ ನನಗೆ ಬೇಕಾದ ಗಂಡನ್ನ ಮಾಡ್ಕೊಂಡೆ'. ನನ್ನೊಳಗೇ ಇರುವ ವಿಶ್ವಸತ್ಯಗಳನ್ನು ಹುಡುಕುವ, ಗೊಂದಲಗೊಳ್ಳುವ, ಅರಿಯುವ ಒಂದು ಪಥವಿದು. ನನಗೆ ಗೊತ್ತಿರುವಂತೆ ಈ ಮಿಸ್ಟಿಸಿಸಂಗೆ ಹತ್ತಿರವಾಗಿರುವ 'ಅನುಭಾವ' ಎಂಬಂತಹ ಒಂದು ಪದ ಭಾರತದ ಬೇರಾವ ಭಾಷೆಗಳಲ್ಲೂ ಇಲ್ಲ. ಇದು ಕನ್ನಡದ ಒಂದು ಸಂಪತ್ತು. ಸಂಸ್ಕೃತದ ನಾಟ್ಯಶಾಸ್ತ್ರ, ಕಾವ್ಯಮೀಮಾಂಸೆಯಲ್ಲಿ ಈ ಪದ ಬಂದರೂ ಅಲ್ಲಿ ಇದಕ್ಕಿರುವ ಅರ್ಥವೇ ಬೇರೆ. ನಾನು ಈ ಅನುಭಾವಿ ಪರಂಪರೆಯಿಂದ ಇದನ್ನು ಪಡೆದೆ. ಭಾರತೀಯ ಅನುಭಾವಿ ಪರಂಪರೆ, ಭಾರತದಲ್ಲದ ಅನುಭಾವಿ ಪರಂಪರೆ ಎಲ್ಲವುಗಳಿಂದ ಕಲಿಯಲು ಯತ್ನಿಸಿದೆ. ಕಾವ್ಯ ಎನ್ನುವುದು ಯಾವುದೇ ಒಂದು ದೃಷ್ಟಿಕೋನದ, ಸಿದ್ಧಾಂತದ ಅನುಕರಣೆಯಾಗಲಿ, ಸಮರ್ಥನೆಯಾಗಲಿ ಅಲ್ಲ. ಕಾವ್ಯ ಎನ್ನುವುದು ಕೇವಲ ಲೌಕಿಕ ಅನುಭವವಲ್ಲ. ಬಂಡಾಯದವರು 'ಖಡ್ಗವಾಗಲಿ ಕಾವ್ಯ' ಎಂದಾಗ ನಾನು ತಮಾಷೆ ಮಾಡ್ತಿದ್ದೆ; ಖಡ್ಗ ಯಾರಿಗೂ ಉಪಯೋಗಕ್ಕೆ ಬರೋದಿಲ್ಲ. ಯಾಕೆಂದರೆ ಅದಾಗ್ಲೆ ಬಂದೂಕು, ಪಿಸ್ತೂಲು, ಬಾಂಬುಗಳು ಬಂದಿವೆ. ಹೀಗಾಗಿ ಎಲ್ಲರಿಗೂ ಉಪಯೋಗಕ್ಕೆ ಬರುವ